‘ಅವಳಿಗೆ ನನ್ನ ಮೇಲೆ ಪ್ರೀತಿಯಿದೆಯೆಂಬ ವಿಶ್ವಾಸವಿದೆ.’

‘ಯಾವತ್ತೂ ಇಲ್ಲ.’

‘ಹೌದು... ನಾನು ಹೇಳೋದು ಸತ್ಯ.’

‘ಹೊರಟು ಹೋಗು ಇಲ್ಲಿಂದ.’ ಮಂತ್ರವಾದಿ ಮಂಚದಿಂದ ಎದ್ದು ಕುಳಿತ. ಅವನ ದೇಹ ತುಂಬಾ ಸಣ್ಣಗಾಗಿ, ಪೇಲವಗೊಂಡಿತ್ತು. ಡಾಕ್ಟರರಿಗೆ ಅವ್ಯಕ್ತವಾದ ಅನುಕಂಪ ಆ ಮುದುಕನ ಮೇಲುಂಟಾಯಿತು. ಯುದ್ಧದಲ್ಲಿ ಕೆಳಕ್ಕೆ ಬೀಳಲಿರುವ ಎದುರಾಳಿಯ ಮೇಲೆ ಉಂಟಾಗುವ ಕ್ಷಮೆಯೂ ತೋರಿತು.

‘ಈಗ ನಾನು ಹೋಗುತ್ತೇನೆ. ಇವತ್ತಲ್ಲವಾದರೆ ನಾಳೆ ನೀವು ಸತ್ತ ನಂತರವಾದರೂ ಅವಳು ನನ್ನ ಹೆಂಡತಿಯಾಗುತ್ತಾಳೆ.’

ಡಾಕ್ಟರ್ ಹೇಳಿದರು.

‘ಸುವರ್ಣಾ’ ಮಂತ್ರವಾದಿ ಕರೆದ, ‘ಇಲ್ಲಿ ಬಾ ಮಗಳೆ. ಇವನಿಗೆ ಇಲ್ಲಿಂದ ಹೊರಟು ಹೋಗಲು ಹೇಳು. ಏನೇನೋ ಹುಚ್ಚುಚ್ಚಾಗಿ ಮಾತನಾಡ್ತಾ ಇದ್ದಾನೆ. ನಿನಗೆ ಇವನ ಮೇಲೆ ಪ್ರೀತಿ ಇದೆಯಂತೆ! ಪ್ರೀತಿ! ಹ ಹ್ಹ ಹ್ಹ.’

ಮತ್ತೊಂದು ಕೋಣೆಯಿಂದ ಮಗಳು ಹೊರ ಬಂದಳು.

‘ಹೌದಪ್ಪ. ನಾನು ಇವರನ್ನು ಪ್ರೀತಿಸುತ್ತಿದ್ದೇನೆ. ಯಾವಾಗಲೂ ಪ್ರೀತಿಸುತ್ತಲಿದ್ದೆ’ ಅವಳ ಧ್ವನಿ ಬಂಗಾರದ ನಾಣ್ಯಗಳ ಸದ್ದಿನಂತಿತ್ತು. ಡಾಕ್ಟರ್ ಅವಳ ಮುಖವನ್ನು ನೋಡಿ ಕೃತಜ್ಞತೆಯಿಂದ ನಕ್ಕ.

‘ನಿನ್ನನ್ನು ನಾನು ಕೊಲ್ಲುತ್ತೇನೆ; ಕೃತಜ್ಞತೆ ಇಲ್ಲದವಳು ನೀನು.’ ಮಂತ್ರವಾದಿ ಗಡಬಡಿಸಿ ಎದ್ದು ನಿಂತ. ಆದರೆ ಆತ ತಕ್ಷಣ ದಣಿದು ನೆಲಕ್ಕೆ ಬಿದ್ದ. ಅನಂತರ ಅತ್ತಿಂದಿತ್ತ ಉರುಳುವುದು, ತೇಕುವುದು ಮಾಡುತ್ತಿದ್ದ. ಅವಳು ಡಾಕ್ಟರ್‌ರಿಗೆ ಹೋಗುವಂತೆ ಸನ್ನೆ ಮಾಡಿದಳು. ಅವನು ಮನಸ್ಸಿಲ್ಲದ ಮನಸ್ಸಿನಿಂದ ಅವರಿಂದ ಬೀಳ್ಕೊಂಡು ಮನೆಗೆ ಮರಳಿದ.

ಮತ್ತೆ, ತಾನು ಕೆಲಸ ಮಾಡುವಲ್ಲಿಗೆ ಅಮ್ಮ ಕಳುಹಿಸಿದ್ದ ಒಂದು ಪತ್ರವನ್ನು ಓದಿದಾಗ ಆ ದೃಶ್ಯವನ್ನು ಅವನು ಪುನಃ ಸ್ಮರಿಸಿಕೊಂಡ.

ಅಮ್ಮ ಬರೆದಿದ್ದರು, ‘...ರಾತ್ರಿಯೆಲ್ಲಾ ಅಳು, ರೋಧನೆಗಳು ಕೇಳಿಸಿದವು.’ ‘ಯಾರನ್ನು ಕೊಂದನೋ ತಿಳಿಯದು, ಹೀಗೊಂದು ಮನೆ ಇರುವುದೇ ಊರಿಗೆ ಅಪಾಯ...’

ಏನಾಗಿರಬಹುದು? ಅವಳನ್ನು ಆ ಮಂತ್ರವಾದಿ ಹೊಡೆದನೇ? ಆಕ್ಷೇಪಿಸಿದನೆ? ಇಷ್ಟೊಂದು ದೂರ ವಾಸವಾಗಿರುವ ತನ್ನ ಅಸಹಾಯಕತೆಯ ಕುರಿತು ಯೋಚಿಸಿ ಡಾಕ್ಟರ್ ತುಂಬಾ ವಿಷಣ್ಣನಾದ.

ಆ ಮೇಲೆ ಮಂತ್ರವಾದಿಯೂ ಸತ್ತ. ಡಾಕ್ಟರಿಗೆ ಅಂದಿಗೆ ಇಪ್ಪತ್ತೆಂಟು ವರ್ಷ ವಯಸ್ಸು. ಅವನು ಅಮ್ಮನನ್ನು ನೋಡಲು ಬಂದಾಗ, ಪುನಃ ಅವನ ಮದುವೆಯ ವಿಚಾರದ ಬಗ್ಗೆ ಮಾತನಾಡಲಾಯಿತು. ಆಗ ಅಮ್ಮ ಹೇಳಿದ ಮಾತುಗಳು ಅವನನ್ನು ಸ್ತಬ್ಧನನ್ನಾಗಿಸಿತು.

‘ಆ ಮಗಳು ಸತ್ತು ಎಷ್ಟು ವರ್ಷಗಳಾದವು! ಅವಳನ್ನು ಕಾಣದೆ ನಾಲ್ಕೈದು ವರ್ಷಗಳೇ ಕಳೆದವು.’

‘ಸತ್ತು ಹೋದಳಾ, ಯಾರು ಹೇಳಿದರು.’

‘ಯಾರೂ ಹೇಳಿಯಲ್ಲ. ಏಕೆಂದರೆ ಯಾರೂ ಅದನ್ನು ಕಾಣಲಿಲ್ಲ. ಸತ್ತು ಹೋಗಿರಬೇಕೆಂದು